# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ (ನಾಮನಿರ್ದೇಶನ ಹೊಂದಿದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 968 |
| ಉತ್ತರಿಸುವ ಸಚಿವರು | : | ಮಾನ್ಯ ಕೈಮಗ್ಗ ಮತ್ತು ಜವಳಿ, ಸಕ್ಕರೆ ಹಾಗೂ ಕಬ್ಬು ಅಭಿವೃದ್ಧಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 27-12-2022. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಿಂದ ಕಳೆದ ಮೂರು ವರ್ಷಗಳಲ್ಲಿ ಖರೀದಿ ಸಲಾಗಿರುವ ಜವಳಿ ಉತ್ಪನ್ನಗಳಾವುವು; (ವಿವರಗಳನ್ನು ನೀಡುವುದು). | ನಿಗಮವು ಕಳೆದ ಮೂರು ವರ್ಷಗಳಲ್ಲಿ ಸಮವಸ್ತ್ರಗಳ ಬಟ್ಟೆ, ಸಮವಸ್ತ್ರಗಳು, ಬೆಡ್ ಶೀಟ್ ಜಮಖಾನಗಳು, ಟವೆಲ್ ಗಳನ್ನು ಖರೀದಿಸಿದೆ. |
| (ಆ) | ಈ ಉತ್ಪನ್ನಗಳನ್ನು M/S NCCF ಕೇಂದ್ರಿಯ ಬಂಡಾರ ಹಾಗೂ KCCF ಸಂಸ್ಥೆಗಳಿಂದ ಖರೀದಿಸಿದ್ದು, ಈ ಸಂಸ್ಥೆಗಳು ಸಹಕಾರಿ (Co-Operative) ಸಂಸ್ಥೆಗಳಾಗಿದ್ದು, KTTP (4H) ಕಾಯ್ದೆಯಡಿ ನಿಗಮಕ್ಕೆ ಸರ್ಕಾರಿ ಸಂಸ್ಥೆಗಳಿಂದ ಖರೀದಿಸಲು (ಕೈಮಗ್ಗ) ಅವಕಾಶವಿದ್ದು, ಸಹಕಾರಿ ಸಂಸ್ಥೆಗಳಿಂದ ಖರೀದಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರವು ಕೈಗೊಂಡ ಕ್ರಮಗಳೇನು; | M/S NCCF ಕೇಂದ್ರಿಯ ಬಂಡಾರ ಸಂಸ್ಥೆಗಳು ಕೇಂದ್ರ ಸರ್ಕಾರದ ಸಹಕಾರಿ ಸಂಸ್ಥೆಗಳಾಗಿರುತ್ತದೆ ಹಾಗೂ KCCF ಸಹಕಾರಿ ಸಂಸ್ಥೆಯಾಗಿರುತ್ತದೆ. ಕರ್ನಾಟಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಕಲಂ 4(ಹೆಚ್) ರಲ್ಲಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ಈಗಾಗಲೇ ವಿನಾಯಿತಿ ನೀಡಿ ಆದೇಶಿಸಿರುವುದರಿಂದ ಹಾಗೂ ಕೆ.ಹೆಚ್.ಡಿ.ಸಿ ನಿಗಮ ಬಲವರ್ಧನೆ ಹಾಗೂ ನೇಕಾರರ ಹಿತದೃಷ್ಟಿಯಿಂದ, ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳು ಅಂದರೆ, ಕೆ.ಹೆಚ್.ಡಿ.ಸಿ ನಿಗಮದಿಂದ ಪೂರೈಸಿಕೊಳ್ಳುತ್ತಿರುವ ಇಲಾಖೆ, ನಿಗಮ/ಮಂಡಳಿಗಳನ್ನು ಹೊರತುಪಡಿಸಿ, ಉಳಿದ ಇಲಾಖೆಗಳು /ನಿಗಮ/ಮಂಡಳಿಗಳು ತಮಗೆ ಅವಶ್ಯವಿರುವ ಜವಳಿ ಮತ್ತು ಜವಳಿ ಉತ್ಪನ್ನಗಳಲ್ಲಿ ಕನಿಷ್ಟ ಶೇ.25 ರಷ್ಟು ಕೆ.ಟಿ.ಪಿ.ಪಿ ಕಾಯ್ದೆ ಸೆಕ್ಷನ್ 4(ಹೆಚ್) ರಡಿಯಲ್ಲಿ ಕಡ್ಡಾಯವಾಗಿ ಕೆ.ಹೆಚ್.ಡಿ.ಸಿ ನಿಗಮದಿಂದ ಪೂರೈಸಿಕೊಳ್ಳುವಂತೆ ಸರ್ಕಾರ ಆದೇಶಿಸಿದೆ. |
| (ಇ) | ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು ಪ್ರಾರಂಭದಿಂದ ಇಲ್ಲಿಯವರೆಗೆ ಖರೀದಿಸಿರುವ ಜವಳಿ ಉತ್ಪನ್ನಗಳ ಮೌಲ್ಯ ಹಾಗೂ ಈ ಖರೀದಿಯಿಂದ ನಿಗಮದಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೇಕಾರರಿಗೆ ಆಗಿರುವ ಅನುಕೂಲಗಳೇನು? | ನಿಗಮದಿಂದ ಈವರೆಗವಿಗೂ ಖರೀದಿಸಿರುವ ಜವಳಿ ಉತ್ಪನ್ನಗಳ ಅಂದಾಜು ಮೌಲ್ಯ ರೂ.919.51ಕೋಟಿ ಗಳಾಗಿರುತ್ತದೆ. ಜವಳಿ ಉತ್ಪನ್ನಗಳನ್ನು ಖರೀದಿಸಿ ಸರಬರಾಜು ಮಾಡುವಲ್ಲಿ ನಿಗಮಕ್ಕೆ ಬರುವ ಆದಾಯದಿಂದ ನಿಗಮದ ನೇಕಾರರಿಗೆ ನೀಡುವ ಕಚ್ಚಾ ಖರೀದಿ, ನೇಕಾರರು ನೇಯ್ಗೆ ಮಾಡಿಕೊಡುವ ಬಟ್ಟೆಯ ಪರಿವರ್ತನಾ ದರ ನೀಡಲಾಗುತ್ತಿದೆ ಹಾಗೂ ನಿಗಮದ ಆಡಳಿತಾತ್ಮಕ ವೆಚ್ಚವನ್ನು ಈ ಆದಾಯದಿಂದಲೇ ಭರಿಸಲಾಗುವುದು, ಸರ್ಕಾರದಿಂದ ನಿಗಮಕ್ಕೆ ಯಾವುದೇ ಅನುದಾನವು ಈ ವೆಚ್ಚಗಳಿಗೆ ಬಿಡುಗಡೆಯಾಗುವುದಿಲ್ಲ. |

ಸಂಖ್ಯೆ: CI 306 JAKE 2022

(ಶಂಕರ ಬ. ಪಾಟೀಲ ಮುನೇನಕೊಪ್ಪ)
ಕೈಮಗ್ಗ ಮತ್ತು ಜವಳಿ, ಸಕ್ಕರೆ ಹಾಗೂ ಕಬ್ಬು ಅಭಿವೃದ್ಧಿ ಸಚಿವರು